# ವೃತ್ತಿ ಶಿಕ್ಷಣ ಪಡೆಯಲು ಸಲಹೆ

■ ವಿಕ ಸುದ್ದಿಲೋಕ ಶ್ರೀನಿವಾಸಪುರ

ಗ್ರಾಮೀಣ ವಿದ್ಯಾರ್ಥಿಗಳು ಜೀವನೋಪಾಯ ರೂಪಿಸಿಕೊಳ್ಳುವ ವೃತ್ತಿಶಿಕ್ಷಣವನ್ನು ಪಡೆದುಕೊಳ್ಳಬೇಕೆಂದು ಎಂಜಿನಿಯರ್ ಎಂ.ಆರ್.ರಾಜಣ್ಣ ತಿಳಿಸಿದರು.

ತಾಲೂಕಿನ ಓಜಲಹಳ್ಳಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸ್ಪಂದನ ಫೌಂಡೇಷನ್‌ನಿಂದ ಏರ್ಪಡಿಸಿದ್ದ ಲೇಖನಿ ಸಾಮಗ್ರಿ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಜನತೆ ಸರಕಾರಿ ಶಾಲೆಯನ್ನು ಕಡೆಗಣಿಸದೆ ಮಕ್ಕಳನ್ನು ಸೇರಿಸಬೇಕೆಂದರು. ಸರಕಾರ ಮತ್ತು ದಾನಿಗಳಿಂದ ದೊರೆಯುವ ಸೌಲಭ್ಯಗಳನ್ನು ಬಳಸಿಕೊಂಡು ವಿದ್ಯಾರ್ಥಿಗಳು ಗುಣಮಟ್ಟದ ಶಿಕ್ಷಣ ಪಡೆದು ಸಂಸ್ಕೃತಿ ಮತ್ತು ಸಂಪ್ರದಾಯ ಅರಿತು ಸೇವಾ ಮನೋಭಾವದಿಂದ ಬದುಕಬೇಕೆಂದು ನುಡಿದರು. ಶಾಲೆಯ 80 ವಿದ್ಯಾರ್ಥಿಗಳಿಗೆ ಸಮವಸ್ತ್ರ ನೋಟ್ ಪುಸ್ತಕ, ಜಾಮೆಟ್ರಿ, ಬ್ಯಾಗ್ ವಿತರಿಸಲಾಯಿತು.

ಗ್ರಾ.ಪಂ.ಅಧ್ಯಕ್ಷ ಎಸ್.ಶ್ರೀನಿವಾಸಪ್ಪ ಅಧ್ಯಕ್ಷತೆ ವಹಿಸಿದ್ದರು. ಸಿಆರ್‌ಸಿ ಆಂಜನಪ್ಪ ಹಾಜರಿದ್ದರು. ಕೆ.ರಾಮಮೂರ್ತಿ ಸ್ವಾಗತಿಸಿದರು. ಎಸ್.ಕೆ.ಮುನಿರತ್ನಯ್ಯ ವಂದಿಸಿದರು.

ವಿಕ ಚಿತ್ರಲೋಕ




ಶ್ರೀನಿವಾಸಪುರದ ಓಜಲಪಲ್ಲಿ ಸರಕಾರಿ ಶಾಲಾ ವಿದ್ಯಾರ್ಥಿಗಳಿಗೆ ಸ್ಪಂದನ ಫೌಂಡೇಷನ್ ಮುಖ್ಯಸ್ಥ ಎಂಜಿನಿಯರ್ ಆರ್.ರಾಜಣ್ಣ ಲೇಖನಿ ಸಾಮಗ್ರಿಗಳನ್ನು ವಿತರಿಸಿದರು.